**<u>ಹೆಚ್ಚುವರಿ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಜಮಖಂಡಿ</u>**

ಸಿ.ಸಿ. ನಂ– 1854/2025

DW–1

<u>ದಿನಾಂಕಃ 10.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**ಮುಖ್ಯ ವಿಚಾರಣೆಃ ಆರೋಪಿ ಪರವಾಗಿ ಶ್ರೀ. ಎ.ಎಮ್.ಎಮ್. ವಕೀಲರಿಂದಃ–** ಪಿರ್ಯಾದಿಯ ಪರಿಚಯ ಇಲ್ಲ. ನಾನು ವಾಟರ ಟ್ರೀಟ್ ಮೇಂಟ್ ಪ್ಲಾಂಟ್ ನಲ್ಲಿ ಕಮಿಷನರ್ ಆಗಿ ಕೆಲಸ ಮಾಡುತ್ತೇನೆ ಹಾಗೂ ಒಕ್ಕಲುತನ ಮಾಡುತ್ತೇನೆ. ವಾಸು ನ್ಯಾಮಗೌಡ ಹಾಗೂ ನನ್ನ ನಡುವೆ ವ್ಯವಹಾರ ಇತ್ತು. ಅದಕ್ಕಾಗಿ ನಾನು ವಾಸು ನ್ಯಾಮಗೌಡ ಇವರಿಗೆ ಚೆಕ್ಕು ನೀಡಿದೆ. ವಾಸು ನ್ಯಾಮಗೌಡ ಇವರು ನನಗೆ ರೂ.1,00,000/–ಹಣವನ್ನು ಸಾಲವಾಗಿ ನೀಡಿದ್ದರು. ಅದಕ್ಕೆ ಭದ್ರತೆಗಾಗಿ ನಾನು ಒಂದು ಚೆಕ್ಕು ನೀಡಿದ್ದೆ. ನಾನು ಅವರಿಗೆ ರೂ.75,000/– ಹಣ ಮರಳಿ ನೀಡಿದ್ದೇನೆ. ನಂತರ 4–5 ತಿಂಗಳ ನಂತರ ಉಳಿದ ರೂ.25,000/– ಹಣವನ್ನು ನೀಡಿರುತ್ತೇನೆ. ಅವರು ನನಗೆ ಚೆಕ್ಕನ್ನು ನೀಡಿರುವುದಿಲ್ಲ. ಚೆಕ್ಕಿನ ಸಂಬಂಧವಾಗಿ ನನಗೆ ಮತ್ತು ಅವರ ನಡುವೆ ಜಗಳವಾಗಿದೆ. ಬಡ್ಡಿ ಕೇಳಿದಾಗ ನಾನು ಹಣದ ತೊಂದರೆ ಇದ್ದ ಕಾರಣ ನೀಡದೇ ಇದ್ದ ಕಾರಣ ಬೇರೆಯವರಿಗೆ ಹೇಳಿಸಿ ನನ್ನ ವಿರುದ್ಧ ದೂರು ದಾಖಲು ಮಾಡಿದ್ದಾರೆ. ಚೆಕ್ ಮೇಲೆ ಸಹಿ ಮಾತ್ರ ಮಾಡಿದ್ದೇನೆ. ಅದರಮೇಲಿರುವ ಬರವಣಿಗೆ ನನ್ನದಲ್ಲ. ಅವರ ನೋಟೀಸಿಗೆ ನಾನು ಪ್ರತ್ಯುತ್ತರ ನೀಡಿದ್ದೇನೆ.

ನಾನು ಯಾವುದೇ ತಪ್ಪು ಮಾಡಿಲ್ಲ, ನನ್ನನ್ನು ಬಿಡುಗಡೆಗೊಳಿಸಬೇಕು ಎಂದುವಿನಂತಿಸಿಕೊಳ್ಳುತ್ತೇನೆ. ನಾನು ಈ ಕೆಳಗಿನ ದಾಖಲೆಗಳನ್ನು ಹಾಜರುಪಡಿಸುತ್ತಿದ್ದೇನೆ.

1. 11 ಸ್ಯಾಲರಿ ಸ್ಲಿಪ್ ಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಡಿ–1 ರಿಂದ ನಿಡಿ–11 ಎಂದು ಗುರುತಿಸಲಾಯಿತು.
2. ಒಂದು ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು ಅದನ್ನು ನಿಡಿ–12 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ.ಡಿ.ಟಿ.ಬಿ. ಫಿರ್ಯಾದಿದಾರರ ಪರ ವಕೀಲರಿಂದ–** ಪಿರ್ಯಾದುದಾರರ ಪರ ವಕೀಲರು ಸಮಯಾವಕಾಶ ಕೋರಿದ್ದು ಸಮಯ ನೀಡಿ ಪಾಟೀ ಸವಾಲನ್ನು ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೆ.ಸರಿ ಇದೆ

Sd/–

ಹೆಚ್ಚುವರಿ ದಿವಾಣಿ ಮತ್ತು ಜೆ.ಎಂ.ಎಫ್.ಸಿ.

ನ್ಯಾಯಾಧೀಶರು ಜಮಖಂಡಿ.